# ಕರ್ನಾಟಕ ವಿಧಾನ ಪರಿಷತ್ತು

**ಸಂಖ್ಯೆ:ಕವಿಪ:೦೧:ಅಸ:ಸಸೂಪ:(24):2022-23**

**ವಿಧಾನ ಪರಿಷತ್ತಿನ ಸಚಿವಾಲಯ,**
**ಅಂಚೆ ಪೆಟ್ಟಿಗೆ ಸಂಖ್ಯೆ: 5079, ವಿಧಾನ ಸೌಧ,**
**ಬೆಂಗಳೂರು-560 001, ದಿನಾಂಕ:19.08.2022.**

**ಕಾರ್ಯದರ್ಶಿಯವರಿಂದ,**
**ಕರ್ನಾಟಕ ವಿಧಾನ ಪರಿಷತ್ತು.**

**ಶ್ರೀಯುತರುಗಳಾದ:**

| | | |
|---|---|---|
| 01 ಎಂ.ಕೆ. ಪ್ರಾಣೇಶ್ | | **ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಅಧ್ಯಕ್ಷರು** |
| 02 ನಸೀರ್ ಅಹಮದ್ | | **ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಸದಸ್ಯರು, ಅರ್ಜಿಗಳ ಸಮಿತಿ** |
| 03 ಪುಟ್ಟಣ್ಣ | : | " |
| 04 ಮರಿತಿಬ್ಬೇಗೌಡ | : | " |
| 05 ಸುನೀಲ್ ವಲ್ಯಾಪುರೆ | : | " |
| 06 ಪಿ.ಆರ್. ರಮೇಶ್ | : | " |
| 07 ಮೋಹನ್ ಕುಮಾರ್ ಕೊಂಡಜ್ಜಿ | : | " |
| 08 ಎಸ್.ಎಲ್. ಭೋಜೇಗೌಡ | : | " |

**ಮಾನ್ಯರೆ,**

**ವಿಷಯ: ವಿಧಾನ ಪರಿಷತ್ತಿನ ಅರ್ಜಿಗಳ ಸಮಿತಿ ಸಭೆಗೆ ಹಾಜರಾಗುವ ಬಗ್ಗೆ.**

******

ಕರ್ನಾಟಕ ವಿಧಾನ ಪರಿಷತ್ತಿನ ಅರ್ಜಿಗಳ ಸಮಿತಿಯು **ದಿನಾಂಕ:25-08-2022ರ ಗುರುವಾರದಂದು ಬೆಳಗ್ಗೆ 11.00 ಗಂಟೆಗೆ** ಶಾಸಕರ ಭವನ ಕಟ್ಟಡ-5ರ, 3ನೇ ಮಹಡಿಯಲ್ಲಿರುವ ವಿಧಾನ ಪರಿಷತ್ತಿನ ಸಮ್ಮೇಳನ ಸಭಾಂಗಣದಲ್ಲಿ ಸಭೆ ಸೇರಿ ನಂತರ ಈ ಸೂಚನಾ ಪತ್ರದೊಂದಿಗೆ ಲಗತ್ತಿಸಲಾಗಿರುವ **"ನಗರಾಭಿವೃದ್ಧಿ ಇಲಾಖೆ"**ಗೆ ಸಂಬಂಧಿಸಿದ ಬಾಕಿ ಅರ್ಜಿಗಳನ್ನು ಪರಿಶೀಲಿಸುವ ಸಲುವಾಗಿ ಸ್ಥಳ ಪರಿವೀಕ್ಷಣೆಗೆ ತೆರಳಲಿದೆ.

ಆದುದರಿಂದ, ಸದರಿ ಸಭೆಗೆ ತಾವು ಹಾಜರಾಗಬೇಕೆಂದು ಕೋರಲು ನಿರ್ದೇಶಿತಳಾಗಿದ್ದೇನೆ.

**ತಮ್ಮ ವಿಶ್ವಾಸಿ,**

ಶಾಂತ

**(ಕೆ.ಎಸ್.ಶಾಂತ)**
**ಅಧೀನ ಕಾರ್ಯದರ್ಶಿ,**
ಅರ್ಜಿಗಳ ಸಮಿತಿ,
ಕರ್ನಾಟಕ ವಿಧಾನ ಪರಿಷತ್ತು.

**ಪ್ರತಿಗಳು:-**

01 .ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿ, ಕ.ವಿ.ಪ
02. ಮಾನ್ಯ ವಿರೋಧ ಪಕ್ಷದ ನಾಯಕರ ಆಪ್ತ ಕಾರ್ಯದರ್ಶಿ, ಕವಿಪ
03. ಮಾನ್ಯ ಸರ್ಕಾರಿ ಮುಖ್ಯ ಸಚೇತಕರ ಆಪ್ತ ಕಾರ್ಯದರ್ಶಿ, ಕವಿಪ
04. ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರ ಆಪ್ತ ಕಾರ್ಯದರ್ಶಿ, ಕವಿಪ.
05. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಕ.ವಿ.ಪ
06. ಅಪರ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿಯವರುಗಳ ಆಪ್ತ ಸಹಾಯಕರು, ಕ.ವಿ.ಪ.
07. ಮುಖ್ಯ ಚರ್ಚಾ ಸಂಪಾದಕರು / ಚರ್ಚಾ ಸಂಪಾದಕರು / ಅಭಿಲೇಖನಾಧಿಕಾರಿಯವರು, ಕ.ವಿ.ಪ
08. ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ, ಅರ್ಜಿಗಳ ಸಮಿತಿ / ಅಧೀನ ಕಾರ್ಯದರ್ಶಿ, ಲೆಕ್ಕಪತ್ರಗಳ ಶಾಖೆ.
09 ಗಣಕ ಕೇಂದ್ರ, ಕ.ವಿ.ಪ
10. ಕಾಂಗ್ರೆಸ್(ಐ), ಭಾರತೀಯ ಜನತಾ ಪಕ್ಷ, ಜನತಾ ದಳ(ಎಸ್), ಶಾಸಕಾಂಗ ಪಕ್ಷಗಳ ಕಾರ್ಯಾಲಯ, ವಿಧಾನ ಸೌಧ.
11. ಕ್ಷೇತ್ರಾಧಿಕಾರಿ/ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್, ಶಾಸಕರ ಭವನ, ಕವಿಪ
12. ಕರ್ನಾಟಕ ವಿಧಾನ ಪರಿಷತ್ತಿನ ಎಲ್ಲಾ ಅಧಿಕಾರಿಗಳು ಹಾಗೂ ಶಾಖೆಗಳು.

---

# ಕರ್ನಾಟಕ ವಿಧಾನ ಪರಿಷತ್ತು

## ಅರ್ಜಿಗಳ ಸಮಿತಿ

### ನಗರಾಭಿವೃದ್ಧಿ ಇಲಾಖೆಯ ಸಂಬಂಧಿಸಿದ ಸ್ಥಳ ಪರಿಶೀಲನೆ ನಡೆಸಲಿರುವ ಅರ್ಜಿಗಳ ಪಟ್ಟಿ

| ಕ್ರಮ ಸಂಖ್ಯೆ | ಸದಸ್ಯರುಗಳ ಹೆಸರು ಮತ್ತು ಅರ್ಜಿಗಳ ಸಂಖ್ಯೆ ಶ್ರೀಮತಿ/ಶ್ರೀಯುತರುಗಳಾದ | ವಿಷಯ |
|---|---|---|
| 01 | ಪುಟ್ಟಣ್ಣ<br>17/2022 | ಬೆಂಗಳೂರು ದಕ್ಷಿಣ ತಾಲ್ಲೂಕು ಕೇಂಗೇರಿ ಹೋಬಳಿ ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಹೊಂದಿಕೊಂಡಿರುವ ಕೆಂಚನಪುರ ಗ್ರಾಮದ ರಾಮಸಂದ್ರ ಹಿರೆಕೆರೆಯನ್ನು ಸುತ್ತಮುತ್ತಲಿನ ಜಮೀನುಗಳನ್ನು ಒತ್ತುವರಿ ಮಾಡಿದ್ದು ಹಾಗೂ ನಗರದ ತ್ಯಾಜ್ಯ ವಸ್ತುಗಳನ್ನು ಹಲವಾರು ಜನರು ಕೆರೆಗೆ ಲಾರಿ ಮತ್ತು ಟ್ರಾಕ್ಟ್‌ರಗಳಲ್ಲಿ ತಂದು ಸುರಿದಿದ್ದು, ಕೆರೆಯು ಕಲುಷಿತಗೊಳ್ಳುತ್ತಿರುವುದನ್ನು ತಪ್ಪಿಸಿ ಕರೆಯ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ. |
| 02 | ಪುಟ್ಟಣ್ಣ<br>20/2022 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಾಡಪ್ರಭು ಕೆಂಪೇಗೌಡ ಬಡಾವಣೆಯ ಹೈಟೆಕ್ ವಲಯದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಯಾವ ಉದ್ದೇಶಕ್ಕೆ ಭೂ ಸ್ವಾಧೀನಪಡಿಸಿಕೊಂಡಿರುತ್ತಾರೆಯೇ ಅದೇ ಉದ್ದೇಶಕ್ಕೆ ಬಳಸಿಕೊಳ್ಳದೇ ಮೂಲ ಉದ್ದೇಶವನ್ನು ರೈತರಿಗೆ ಮಾರೆಮಾಚಿ ಮತ್ತು (Land Zonal 11 esolution) ಉಲ್ಲಂಘನೆ ಮಾಡಿ ರಸ್ತೆ ಇಕ್ಕೆಲಗಳಲ್ಲಿ ನಿವೇಶನಗಳನ್ನು ರಚಿಸುತ್ತಿರುವ ಬಗ್ಗೆ ತನಿಖೆ ಮಾಡಿ ನ್ಯಾಯ ಒದಗಿಸುವ ಬಗ್ಗೆ. |
| 03 | ಪುಟ್ಟಣ್ಣ<br>21/2022 | ಇನ್‌ಕಮ್‌ಟ್ಯಾಕ್ಸ್ ಹೌಸ್ ಬಿಲ್ಡಿಂಗ್ ಕೋ ಆಪರೇಟಿವ್ ಸೊಸೈಟಿಯವರು ಕಾನೂನು ಬಾಹಿರವಾಗಿ ಬಿ.ಡಿ.ಎ ವತಿಯಿಂದ ಬದಲು ಜಾಗದ ಹೆಸರಿನಲ್ಲಿ ಸಗಟು ಹಂಚಿಕೆ ಮಾಡಿರುವ ಖಾಲಿ ಜಾಗವನ್ನು ಬಿ.ಡಿ.ಎ ವಶಕ್ಕೆ ವಾಪಸ್ಸು ಪಡೆಯುವ ಬಗ್ಗೆ. |
| 04 | ಬಸವರಾಜ ಹೊರಟ್ಟಿ<br>93/2014 | ಬೆಂಗಳೂರು ನಗರ ಪ್ರದೇಶದಲ್ಲಿ ಕಸ ವಿಲೇವಾರಿ ಕುರಿತು. |